ಒ.ಎಸ್. - 81/2020

ಡಿ.ಡಬ್ಲ್ಯ. - 02

**ದಿನಾಂಕ 07-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿ ಪರ ಎಂ.ಕೆ ವಕೀಲರಿಂದಃ**

ಈ ದಾವೆಯ ಪಕ್ಷಗಾರರು ನನಗೆ ಸ್ವತಃ ಗೊತ್ತಿರುವುದಿಲ್ಲ . ವಾದಿ ತಂದೆಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ ಆದರೇ ನೋಟಿಸನ್ನು ನೋಡಿ ಅವರಿಗೆ 8 ಜನ ಮಕ್ಕಳು ಎಂದು ತಿಳಿದುಕೊಂಡಿದ್ದೇನೆ . ವಾದಿ ಮತ್ತು ಪ್ರತಿವಾದಿಗಳಲ್ಲಿ ಯಾರಿಗೆ ನೀವು ಹತ್ತಿರದವರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಯಾರಿಗೂ ಕೂಡ ಹತ್ತಿರದವನಲ್ಲಎಂದು ತಿಳಿಸಿರುತ್ತಾರೆ . ನಾನು ಮುಂಬಯಿನ ಖಾಯಂ ವಾಸಿ . ನಾನು ಮೂಲತಃ ಮಂಗಳೂರಿನವನು . ದಾವಾ ಎ ಶೆಡ್ಯೂಲ್ ಸ್ವತ್ತಿನ ಮಾಹಿತಿಯನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ತಾಯಿ ಕೊಟ್ಟಿರುತ್ತಾರೆ . ನನ್ನ ತಾಯಿ ಮಾರಾಟಗಾರರಿಗೆ ಪಕ್ಕದ ಮನೆಯವರು ಆದ್ದರಿಂದ ದಾವಾ ಎ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ನನಗೆ ಗೊತ್ತಾಯಿತು. ನನ್ನ ತಾಯಿ ಮಾರಾಟಗಾರರ ಪಕ್ಕದ ಮನೆಯವರಾಗಿದ್ದರಿಂದ ನಮಗೆ ಅವರ ಕುಟುಂಬದ ಬಗ್ಗೆ ಗೊತ್ತಿತ್ತು ಎಂದರೆ ಸರಿ . ನಮ್ಮ ತಾಯಿಯ ಮುಖೇನ ಯುಜಿನಾ ಡಿಸೋಜ ಪರಿಚಯವಾಗಿರುತ್ತಾರೆ. ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಎಲ್ಲಾ ದಾಖಲಾತಿಗಳನ್ನು ನೋಡಿರುತ್ತೇನೆ ಅಂದರೆ ನಾನು ವಿಭಾಗಪತ್ರ , ಕರಾರು , ಭೂಮಿ ಪತ್ರ , ಬಿಲ್ಡಿಂಗ್ ಕಟ್ಟಲು ಕೊಟ್ಟ ಪರವಾನಿಗೆ ಪತ್ರ, ಟ್ಯಾಕ್ಸ್ ಪಾವತಿಸಿದ ರಸೀದಿಯನ್ನು ನೋಡಿರುತ್ತೇನೆ . ನಾನು ವಿಭಾಗಪತ್ರವನ್ನು ಓದಲಿಲ್ಲ ಕಾರಣ ಅದು ಕನ್ನಡದಲ್ಲಿತ್ತು . ನಾನು ಖರೀದಿ ಮಾಡುವ ಪೂರ್ವದಲ್ಲಿ ದಾಖಲಾತಿಗಳಲ್ಲಿ ಏನು ಬರೆಯಲಾಗಿತ್ತು ಎಂದು ಸಂಪೂರ್ಣವಾಗಿ ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ . ನನ್ನ ತಾಯಿಗೆ ಕನ್ನಡ ಬರುವುದಿಲ್ಲ. ಯುಜಿನಾ ಡಿಸೋಜಾರವರು ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ನಾನು ಯುಜಿನಾ ಡಿಸೋಜಾರವರಿಗೆ ವಿಭಾಗಪತ್ರದಲ್ಲಿ ಬಂದ ಸ್ವತ್ತನ್ನು ಪರಿಗಣಿಸಿ ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ. ನಾನು ವರ್ಷಕ್ಕೆ 5 ರಿಂದ 6 ಬಾರಿ ಮುಂಬಯಿಯಿಂದ ಮಂಗಳೂರಿಗೆ ಬರುತ್ತೇನೆ. ಯುಜಿನಾ ಡಿಸೋಜಾನನ್ನು ಬಿಟ್ಟರೇ ಅವರ ಕುಟುಂಬದ ಯಾರ ಜೊತೆಯೂ ನಾನು ಅನ್ಯೋನ್ಯವಾಗಿಲ್ಲ ಮತ್ತು ಸಂಪರ್ಕದಲ್ಲಿ ಇಲ್ಲ. ವಿಭಾಗಪತ್ರದ ಆಗುವ ಮೊದಲು ಕುಟುಂಬದ ಎಲ್ಲಾ ಸದಸ್ಯರು ಸೇರಿ ಸಭೆ ನಡೆಸಿ ಸಭೆಯಲ್ಲಿ ಕೆಲವು ತೀರ್ಮಾನ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಸಭೆ ನಡೆದ ಬಗ್ಗೆ ನನಗೆ ಗೊತ್ತಿಲ್ಲ . ಸದ್ರಿ ಸಭೆಯ ತೀರ್ಮಾನ ಪ್ರಕಾರ 1 ಎಕ್ರೆ 21 ಸೆಂಟ್ಸ್ ಜಾಗ ರೋಬಾರ್ಟ್ ಡಿಸೋಜ ರವರ ವಾರೀಸುದಾರರಿಗೆ ಕೊಟ್ಟು ಅವರು ಅದನ್ನು ಮಾರಾಟ ಮಾಡಿ

ಅದರಿಂದ ಬಂದ ಹಣವನ್ನು ಕುಟುಂಬದ ಎಲ್ಲಾ ಹೆಣ್ಣು ಮಕ್ಕಳಿಗೆ ಸಮನಾಗಿ ಹಂಚುವ ಉದ್ದೇಶದಿಂಂದ ಸದ್ರಿ ಜಾಗವನ್ನು ರೋಬಾರ್ಟ್ ಡಿಸೋಜ  ರವರ ವಾರೀಸುದಾರರಿಗೆ ಕೊಡಬೇಕು ಎಂಬ ಕರಾರು ವಿಭಾಗಪತ್ರ ಆಗುವ ಮೊದಲು ನಡೆದ  ಮಾತುಕತೆಯಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ .   ರೋಬಾರ್ಟ್ ಡಿಸೋಜ ರವರ ವಾರೀಸುದಾರರು ಮೋಸದಿಂದ ಸದ್ರಿ 1 ಎಕ್ರೆ 21 ಸೆಂಟ್ಸ್ ಜಾಗವನ್ನು ಮಾತುಕತೆಯಾದ ರೀತಿ ಮಾರಾಟ ಮಾಡಿ ಹೆಣ್ಣು ಮಕ್ಕಳಿಗೆ  ಹಣವನ್ನು ಕೊಡದೇ ತಮ್ಮ ಹೆಸರಿಗೆ ಸದ್ರಿ ಜಾಗವನ್ನು ಮಾಡಿಕೊಂಡರು ಎಂಬ ವಿಷಯ ನನಗೆ ಗೊತ್ತಿಲ್ಲ . ವಿಭಾಂಗಪತ್ರದಲ್ಲಿ ಎಲ್ಲಾ ವಾದಿಯರಿಗೂ ತಲಾ 5 ಸೆಂಟ್ಸ್ ಜಾಗ ಮತ್ತು ಯುಜಿನಾ ಡಿಸೋಜಾ ರವರಿಗೆ 29 ಸೆಂಟ್ಸ್ ಜಾಗವನ್ನು ಕೊಡಲಾಗಿದ್ದ ವಿಷಯ ನನಗೆ ಗೊತ್ತಿತ್ತು. ನಾನು ಸಲ್ಲಿಸಿದ ಪ್ರತಿವಾದ ಪತ್ರದ ಒಕ್ಕಣೆಯನ್ನು ತಿಳಿದುಕೊಂಡಿರುತ್ತೇನೆ.  ಒಂದು ವೇಳೆ ದಾವೆಯನ್ನು ಡಿಕ್ರಿ ಮಾಡಿದರೂ ಕೂಡ ನಾನು ಖರೀದಿಸಿದ ಜಾಗವನುನ ನನ್ನ ಹೆಸರಿಗೆ ಇಡಬೇಕು ಎಂದು ನಾನು ಸಲ್ಲಿಸಿದ ಮುಖ್ಯವಿಚಾರಣೆ ಪತ್ರ ಮತ್ತು ನಾನು ಸಲ್ಲಿಸಿದ ಪ್ರತಿವಾದ ಪತ್ರದ 11 ನೇ ಪ್ಯಾರಾ ದಲ್ಲಿ ಕೋರಿದ್ದೇನೆ ಎಂದರೆ ಸರಿ . ನಾನು ಖರೀದಿಸಿದ ಜಾಗವನ್ನು ನನ್ನ ಹೆಸರಿಗೆ ಕೊಟ್ಟರೇ ವಾದಿಯರು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಲು ನನ್ನ ತಕರಾರು ಇಲ್ಲ. ಆದ್ದರಿಂದ ವಾದಿಯರು ಸಲ್ಲಿಸಿರುವ ವಾದಪತ್ರದಲ್ಲಿ ಇರುವ ಒಕ್ಕಣೆ ಬಗ್ಗೆ ನನ್ನ ತಕರಾರು ಇಲ್ಲ. ಯುಜಿನಾ ಡಿಸೋಜಾ   ನನಗೆ ಬರೆದುಕೊಟ್ಟಿರುವ ಕ್ರಯಪತ್ರ ವಾದಿಯರಿಗೆ ಬದ್ಧಪಡುವುದಿಲ್ಲ ಎಂದರೆ ಸರಿ.  ನಾನು ಖರೀದಿ ಮಾಡಿರುವ 29 ಸೆಂಟ್ಸ್ ಜಾಗವನ್ನು ನನಗೆ allot ಮಾಡಿದರೇ ಉಳಿದಿರುವ ಜಾಗಕ್ಕೆ ನನ್ನ ತಕರಾರು ಇಲ್ಲ .

ಪಾಟೀ ಸವಾಲು ಃ **10** ನೇ  ಪ್ರತಿವಾದಿ ಪರ ವಕೀಲರಿಂದ

10 ನೇ ಪ್ರತಿವಾದಿ 40 ಸೆಂಟ್ಸ್ ಜಾಗವನ್ನು ಖರೀದಿಸಿರುವ ಬಗ್ಗೆ ನನಗೆ ಗೊತ್ತು . 10 ನೇ ಪ್ರತಿವಾದಿ 40 ಸೆಂಟ್ಸ್ ಜಾಗದಲ್ಲಿ ಸ್ವಾಧೀನದಲ್ಲಿ  ಇರುತ್ತಾರೆ ಎಂದರೆ ಸರಿ . ಸುಧಾಕರ್ ತೋನ್ಸೆರವರಿಂದ 10 ನೇ ಪ್ರತಿವಾದಿ 40 ಸೆಂಟ್ಸ್ ಜಾಗವನ್ನು ಖರೀದಿಸಿರುತ್ತಾರೆ ಎಂದರೆ ಸರಿ .

**2** ರಿಂದ **4** ನೇ ಪ್ರತಿವಾದಿಗಳ ಪರ ವಕೀಲರಾದ ಕೆಕೆ ರವರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸುವುದಾಗಿ ತಿಳಿಸಿರುತ್ತಾರೆ

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 81/2020

ಡಿ.ಡಬ್ಲ್ಯು. - 02

ಒ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.